TG – FAME ಸರಣಿ

(ಉದ್ದೇಶಿತ ಗುಂಪಿಗೆ ಹಣಕಾಸು ಜಾಗೃತಿ ಸಂದೇಶಗಳು)




# ಹಣಕಾಸು ಸಾಕ್ಷರತೆ



## ರೈತರಿಗಾಗಿ

ಹಣಕಾಸು ಸಾಕ್ಷರತೆ ಮತ್ತು ಅಭಿವೃದ್ಧಿ ವಿಭಾಗ, ಭಾರತೀಯ ರಿಸರ್ವ್ ಬ್ಯಾಂಕ್

**ಸಂದೇಶ 1**

ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ – ಪ್ರಾಥಮಿಕವಾಗಿ ಬೆಳೆ ಸಾಲದ ಅವಶ್ಯಕತೆಗಳಿಗಾಗಿ ಮತ್ತು ಭಾಗಶಃ ಬಳಕೆ ಉದ್ದೇಶಗಳಿಗಾಗಿ

**ಸಂದೇಶ 2**

ಬೆಳೆ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವುದರಿಂದ ಹಲವು ಪ್ರಯೋಜನಗಳಿವೆ

**ಸಂದೇಶ 3**

ಕೃಷಿ ಉತ್ಪನ್ನಗಳನ್ನು ಹತಾಶೆಯಿಂದ ಮಾರುವುದನ್ನು ತಪ್ಪಿಸಿ – ಗೋದಾಮು ರಸೀದಿಗಳಿಗೆ ಪ್ರತಿಯಾಗಿ ಹಣಕಾಸು ನೆರವು (Financing against Warehouse Receipts) ಪಡೆಯಿರಿ

**ಸಂದೇಶ 4**

ಬೆಳೆ ವಿಮೆ – ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆ (ಪಿಎಂಎಫ್‌ಬಿವೈ)

**ಸಂದೇಶ 5**

ನೈಸರ್ಗಿಕ ವಿಕೋಪದಿಂದ ತಮ್ಮ ಬೆಳೆ ನಾಶವಾದರೆ ಹತಾಶರಾಗದಿರಿ – ಬೆಳೆ ನಷ್ಟ ಪ್ರಮಾಣದ ಬಗ್ಗೆ ನಿಮ್ಮ ಬ್ಯಾಂಕಿಗೆ ತಿಳಿಸಿ ಅವರಿಂದ ನೆರವು ಕೇಳಿರಿ



ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ – ಪ್ರಾಥಮಿಕವಾಗಿ ಬೆಳೆ ಸಾಲದ ಅವಶ್ಯಕತೆಗಳಿಗಾಗಿ ಮತ್ತು ಭಾಗಶಃ ಬಳಕೆ ಉದ್ದೇಶಗಳಿಗಾಗಿ

ಕೃಷಿ ಉತ್ಪನ್ನಗಳನ್ನು ಹತಾಶೆಯಿಂದ ಮಾರುವುದನ್ನು ತಪ್ಪಿಸಿ – ಗೋದಾಮು ರಶೀದಿಯನ್ನು ನೀಡಿ ಕೊಯ್ಲು ನಂತರದ ವೆಚ್ಚಗಳಿಗೆ ಹಣಕಾಸು ನೆರವು ಪಡೆಯಿರಿ#

ಬೆಳೆ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿದರೆ ಹಲವು ಲಾಭಗಳಿವೆ – ಬಡ್ಡಿ ಅನುದಾನ ಯೋಜನೆ*



ನೈಸರ್ಗಿಕ ವಿಕೋಪದಿಂದ ಬೆಳೆ ನಾಶವಾದರೆ ಹತಾಶರಾಗಬೇಡಿ – ಬೆಳೆ ನಷ್ಟ ಪ್ರಮಾಣದ ಬಗ್ಗೆ ನಿಮ್ಮ ಬ್ಯಾಂಕಿಗೆ ತಿಳಿಸಿ, ಸಾಲ ಮರುಪಾವತಿ ಅವಧಿಯ ಪುನರ್ರಚನೆಗೊಳಿಸಿ ನೆರವು ನೀಡುವಂತೆ ಕೇಳಿಕೊಳ್ಳಿ

ನಿಮ್ಮ ಬೆಳೆ ಸಾಲಕ್ಕೆ ವಿಮೆ ಮಾಡಿಸಿ ನಿಮ್ಮ ಹಿತರಕ್ಷಿಸಿಕೊಳ್ಳಿ – ಪ್ರಧಾನ ಮಂತ್ರಿ ಫಸಲು ಬಿಮಾ ಯೋಜನೆ (ಪಿಎಂಎಫ್‌ಬಿವೈ) ಮೂಲಕ ಬೆಳೆ ವಿಮೆ

* ಭಾರತ ಸರ್ಕಾರವು ಕಾಲಕಾಲಕ್ಕೆ ಪ್ರಕಟಿಸುವ ಪ್ರಕಾರ
\# ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ

## ಸಂದೇಶ 1 : ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ – ಪ್ರಾಥಮಿಕವಾಗಿ ಬೆಳೆ ಸಾಲದ ಅವಶ್ಯಕತೆಗಳಿಗಾಗಿ ಮತ್ತು ಭಾಗಶಃ ಬಳಕೆ ಉದ್ದೇಶಗಳಿಗಾಗಿ

'ಕಿಸಾನ್ ಕ್ರೆಡಿಟ್ ಕಾರ್ಡ್' ಯೋಜನೆಯು ರೈತರಿಗೆ ಬೆಳೆ ಉತ್ಪಾದನೆಯ ಸಮಯದಲ್ಲಿ ಬೆಳೆ ಉತ್ಪಾದನೆ (ಸಾಗುವಳಿ ಖರ್ಚು ವೆಚ್ಚಗಳು)ಗೆ ಹಾಗೂ ಆಕಸ್ಮಿಕ ಖರ್ಚುಗಳಿಗೆ ಅಗತ್ಯವಾದ ಮತ್ತು ಸಕಾಲಿಕ ನೆರವು ನೀಡುವ ಗುರಿ ಹೊಂದಿದೆ. ಇದಲ್ಲದೆ ಕೃಷಿಪೂರಕ ಚಟುವಟಿಕೆಗೆ ಸಂಬಂಧಿಸಿದ ಖರ್ಚುವೆಚ್ಚಗಳಿಗೂ ಈ ಯೋಜನೆ ಅನ್ವಯವಾಗಲಿದ್ದು, ಅಗತ್ಯವಿದ್ದಾಗ ಸರಳ ವಿಧಾನದಿಂದ ಸಾಲ ಪಡೆಯುವ ವ್ಯವಸ್ಥೆಯಾಗಿದೆ.

1

ಬೆಳೆ ಬೆಳೆಯಲು ಅಗತ್ಯವಾದ ಅಲ್ಪಾವಧಿ ಅವಶ್ಯಕತೆಗಳನ್ನು ಪೂರೈಸುವುದು

2

ಫಸಲು ಬಂದ ನಂತರದ ಖರ್ಚುವೆಚ್ಚಗಳು

3

ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಾಲದ ನೆರವು

4

ಕೃಷಿ ಉಪಕರಣಗಳ ನಿರ್ವಹಣೆ ಮತ್ತು ಪಶುಸಾಕಣೆ, ಒಳಾಂತರ ಮೀನುಗಾರಿಕೆ ಯಂತಹ ಕೃಷಿ ಸಂಬಂಧಿ ಚಟುವಟಿಕೆ ಗಳಿಗಾಗಿ ದುಡಿಯುವ ಬಂಡವಾಳ

5

ಕೃಷಿಕರ ಗೃಹ ಬಳಕೆ ಅವಶ್ಯಕತೆಗಳು


6

ಪಂಪುಸೆಟ್ಟುಗಳು, ಸಿಂಪಡಿಕೆಗಳು (ಸ್ಪ್ರೇಯರ್ಸ್), ಪಶುಸಾಕಣೆ ಮತ್ತಿತರ ಕೃಷಿ ಹಾಗೂ ಕೃಷಿ ಸಂಬಂಧಿ ಚಟುವಟಿಕೆ ಗಳಲ್ಲಿ ಹೂಡಿಕೆ ಮಾಡಲು ಸಾಲದ ಅವಶ್ಯಕತೆ




ಗಮನಿಸಿ:
1 ರಿಂದ 5 ರವರೆಗೆ ಅಲ್ಪಾವಧಿ ಸಾಲ ಮಿತಿಯ ಭಾಗವಾಗಿಯೂ 6ನೆಯದು ದೀರ್ಘಾವಧಿ ಸಾಲ ಮಿತಿಯ ಭಾಗವಾಗಿಯೂ ಪರಿಗಣಿಸಲ್ಪಡುತ್ತದೆ.

ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಲ್ಲಿ ಅಲ್ಪಾವಧಿ ಸಾಲ ಮಿತಿಯ ಶೇ. 10ರಷ್ಟು ಹಣವನ್ನು ಗೃಹ ಬಳಕೆ ವಸ್ತುಗಳಿಗಾಗಿ ಬಳಸುವ ಅವಕಾಶವಿದ್ದರೂ, ಬಳಕೆದಾರ ತನ್ನ ಖರ್ಚುಗಳಿಗಾಗಿ ಹೆಚ್ಚು ಹಣವನ್ನು ವ್ಯಯ ಮಾಡದೇ ಇರುವುದು ಒಳ್ಳೆಯದು.




**ಏಕೆ?**

ನಿಮ್ಮ ಬೆಳೆ ಸಾಲದ ಅವಶ್ಯತೆಯನ್ನು ಭರಿಸಲು ನೆರವಾಗುವುದು ಕಿಸಾನ್ ಕ್ರೆಡಿಟ್ ಕಾರ್ಡಿನ ಉದ್ದೇಶ. ಕಿಸಾನ್ ಕ್ರೆಡಿಟ್ ಕಾರ್ಡಿನಿಂದ ಪಡೆದ ಬಹಪಾಲು ಹಣವನ್ನು ಗೃಹ ಬಳಕೆ ಉದ್ದೇಶಗಳಿಗಾಗಿ ಖರ್ಚು ಮಾಡಿದರೆ ಅದು ನಿಮ್ಮ ಆದಾಯ ಗಳಿಕೆಯ ಸಾಮರ್ಥ್ಯದ ಮೇಲೆ ಪರಿಣಾಮ ಉಂಟುಮಾಡುತ್ತದೆ. ನೀವು ಕೃಷಿ ಚಟುವಟಿಕೆಗಳಿಂದ ಗಳಿಸುವ ಆದಾಯವು ನಿಮ್ಮ ಕಿಸಾನ್ ಕ್ರೆಡಿಟ್ ಸಾಲದ ಮೇಲಿನ ಬಾಕಿಯನ್ನು ಮರುಪಾವತಿಸಲು ನೆರವಾಗುತ್ತದೆ. ನೀವು ನಿಮ್ಮ ಹಣವನ್ನು ಬೆಳೆ ಸಂಬಂಧಿ ಕಾರ್ಯಗಳಿಂದ ಬೇರೆಡೆಗೆ ಹೊರಳಿಸಿದರೆ ಬೆಳೆ ಸಾಲ ಮರುಪಾವತಿ ಮಾಡುವುದು ನಿಮಗೆ ಅಸಾಧ್ಯವಾಗಬಹುದು.



## ಕಿಸಾನ್ ಕ್ರೆಡಿಟ್ ಕಾರ್ಡಿನ ಲಕ್ಷಣಗಳು

1. ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲಗಾರರಿಗೆ ತಮ್ಮ ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಯಿಂದ ಹಣ ಹಿಂಪಡೆಯಲು ಒಂದು ಎಟಿಎಂ–ಕಂ–ಡೆಬಿಟ್ ಕಾರ್ಡ್ ನೀಡಲಾಗುತ್ತದೆ. ಇದನ್ನು ಬಳಸಿ ಎ.ಟಿ.ಎಂ.ಗಳ ಮೂಲಕ ಹಣ ಹಿಂಪಡೆಯಬಹುದು ಮತ್ತು ಮಾರಾಟ ಪಾವತಿ ಸಾಧನ (ಪಾಯಿಂಟ್ ಆಫ್ ಸೇಲ್)ಗಳ ಮೂಲಕವೂ ಪಾವತಿ ಮಾಡಬಹುದು.

2. ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಯು ಆವರ್ತನ ಖಾತೆಯ ರೂಪದಲ್ಲಿ ಇರುತ್ತದೆ. ಖಾತೆಯಲ್ಲಿ ಧನಿಕೆ ಶಿಲ್ಕು (ಕ್ರೆಡಿಟ್ ಬ್ಯಾಲೆನ್ಸ್) ಇದ್ದಲ್ಲಿ ಉಳಿತಾಯ ಬ್ಯಾಂಕ್ ದರದಲ್ಲಿ ಬಡ್ಡಿ ನೀಡಲಾಗುತ್ತದೆ.

ರೂ. 1.00 ಲಕ್ಷದವರೆಗಿನ ಸಾಲಕ್ಕೆ ಜೊತೆಯಾಧಾರ ನೀಡುವುದನ್ನು ಮನ್ನಾ ಮಾಡಲಾಗಿದೆ.

## ಸಂದೇಶ 2 : ಬೆಳೆ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವುದರಿಂದ ಹಲವು ಪ್ರಯೋಜನಗಳಿವೆ

ಬ್ಯಾಂಕುಗಳಿಂದ ಸಾಲ ಲಭ್ಯತೆ



2017–18ರಲ್ಲಿ ಪಡೆದ ರೂ. 3.00 ಲಕ್ಷವರೆಗಿನ ಅಲ್ಪಾವಧಿ ಬೆಳೆ ಸಾಲಗಳಿಗೆ ಬಡ್ಡಿ ದರ ಶೇ. 4 (ಭಾರತ ಸರ್ಕಾರವು ಕಾಲ್ಕಾಲಕ್ಕೆ ಪ್ರಕಟಿಸುವಂತಹ ಬಡ್ಡಿ ಅನುದಾನ ಯೋಜನೆ)*

---


ನೋಂದಾಯಿತವಾಗದ ಸಂಸ್ಥೆಗಳು/ ಲೇವಾದೇವಿಗಾರರಿಂದ (ಮನಿ ಲೆಂಡರು) ಸಾಲ ಪಡೆಯುವಿಕೆ



ಅಧಿಕ ಬಡ್ಡಿ ದರ. ಜೊತೆಯಾಧಾರ ಅಗತ್ಯವಿರಬಹುದು ಅಥವಾ ಅಗತ್ಯವಿಲ್ಲದಿರಬಹುದು.

---

ಸಕಾಲಕ್ಕೆ ಸರಿಯಾಗಿ ಸಾಲ ಮತ್ತು ಬಡ್ಡಿ ಮರುಪಾವತಿ ಮಾಡಿದರೆ ದೊರೆಯುವ ಪ್ರಯೋಜನಗಳು



- → ಉದರಿ ಮೌಲ್ಯಾಂಕದಲ್ಲಿ ಹೆಚ್ಚಳ
- → ಮುಂದಿನ ಬಾರಿ ಅಧಿಕ ಸಾಲ
- → ಬಡ್ಡಿ ವೆಚ್ಚದಲ್ಲಿ ಇಳಿತ

* ಶೇ. 4ರ ಬಡ್ಡಿ ದರಕ್ಕೆ ಅರ್ಹರಾಗಲು ರೈತರು ಬ್ಯಾಂಕು ನಿಗದಿಪಡಿಸಿದ ಅವಧಿ ದಿನಾಂಕದೊಳಗೇ ಸಾಲ ಮರುಪಾವತಿ ಮಾಡಿರಬೇಕು ಮತ್ತು ಯಾವುದೇ ಸಂದರ್ಭದಲ್ಲಿಯೂ ಮರುಪಾವತಿಯ ಅವಧಿ ಒಂದು ವರ್ಷ ಮೀರಿರಬಾರದು.

## ಸಂದೇಶ 3 : ಕೃಷಿ ಉತ್ಪನ್ನಗಳನ್ನು ಹತಾಶೆಯಿಂದ ಮಾರುವುದನ್ನು ತಪ್ಪಿಸಿ – ಗೋದಾಮು ರಸೀದಿಗಳ ಹಣಕಾಸು ನೆರವು (Financing against Warehouse Receipt) ಪಡೆಯಿರಿ

ನೀವು ಉತ್ತಮ ಫಸಲನ್ನು ಪಡೆದಿದ್ದರೂ, ಬೆಳೆಯನ್ನು ಉತ್ತಮ ಬೆಲೆಗೆ ಮಾರುವವರೆಗೂ ನಿಮ್ಮ ಕೆಲಸ ಅಪೂರ್ಣವಾಗಿದೆ ಎಂದೇ ಅರ್ಥ.



**ಕಡಿಮೆ ಬೆಲೆಗೆ ಮಾರಾಟ ಮಾಡಬೇಡಿ**

**ಗೋದಾಮುಗಳ ಉಪಯೋಗವನ್ನು ಪಡೆದುಕೊಳ್ಳಿ**



ನಿಮಗೆ ನ್ಯಾಯಯುತವಾದ ಬೆಲೆ ಲಭಿಸುತ್ತಿಲ್ಲ ಎಂದೆನಿಸಿದರೆ ನಿಮ್ಮ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಸಂಗ್ರಹಣೆಗೆ ಕೊಟ್ಟು ಗೋದಾಮು ರಶೀದಿ ಪಡೆಯಿರಿ.[#] ನಿಮ್ಮ ತಕ್ಷಣದ ಅವಶ್ಯಕತೆಗಳಿಗೆ ಗೋದಾಮು ರಶೀದಿಯ ಆಧಾರದ ಮೇಲೆ ಬ್ಯಾಂಕಿನಿಂದ ಸಾಲದ ನೆರವು ದೊರೆಯುತ್ತದೆ. ಕಿಸಾನ್ ಕ್ರೆಡಿಟ್ ಕಾರ್ಡಿನ ಸೌಲಭ್ಯ ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬಡ್ಡಿ ಅನುದಾನ ಲಭ್ಯವಿದೆ. ಇದು ಗೋದಾಮುಗಳಲ್ಲಿ ಸಂಗ್ರಾಹ್ಯವಾದ ಉತ್ಪನ್ನಗಳಿಗೆ ನೆಗೋಷಿಯಬಲ್ ಗೋದಾಮು ರಶೀದಿಗಳಿಗೆ ಪ್ರತಿಯಾಗಿ ಕೊಯ್ಲಿನ ನಂತರದ ಆರು ತಿಂಗಳುಗಳವರೆಗಿನ ಹೆಚ್ಚುವರಿ ಅವಧಿಗೆ ಶೇ. 7ರ ಬಡ್ಡಿ ದರದಲ್ಲಿ* ದೊರೆಯುತ್ತದೆ.

* ಭಾರತದ ಸರ್ಕಾರದ ಬಡ್ಡಿ ಅನುದಾನ ಯೋಜನೆಯನ್ನು ಕಾಲಕಾಲಕ್ಕೆ ಪ್ರಕಟಿಸಲಾಗುತ್ತದೆ.

\# ಗೋದಾಮು ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (ಡಬ್ಲ್ಯುಡಿಆರ್ಎ)ದಿಂದ ಮಾನ್ಯತೆ ಪಡೆದ ಗೋದಾಮುಗಳು ನೀಡುವ ರಶೀದಿಯಾಗಿರಬೇಕು.

# ಸಂದೇಶ 4 : ಬೆಳೆ ವಿಮೆ – ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆ (ಪಿಎಂಎಫ್‌ಬಿವೈ)

## ಸಮಗ್ರ ವಿಮಾ ರಕ್ಷೆ

ಬೆಳೆ ವಿಫಲತೆಗೆ ಪ್ರತಿಯಾಗಿ ಸಮಗ್ರ ವಿಮಾ ರಕ್ಷೆಯನ್ನು ಪಿಎಂಎಫ್‌ಬಿವೈ ಒದಗಿಸುತ್ತದೆ. ಇದು ರೈತರ ಆದಾಯವನ್ನು ಸ್ಥಿರಗೊಳಿಸುವುದಲ್ಲದೆ ಅವರು ನವೀನ ಕಾರ್ಯಶೈಲಿಯನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡುತ್ತದೆ.

## ಅತ್ಯಲ್ಪ ಪ್ರೀಮಿಯಂ ದರಗಳು

ಪಿಎಂಎಫ್‌ಬಿವೈಯಲ್ಲಿ ರೈತರಿಗೆ ಅತ್ಯಂತ ಕಡಿಮೆ ಪ್ರೀಮಿಯಂ ದರದಲ್ಲಿ ವಿಮಾ ಸೌಲಭ್ಯ ದೊರೆಯುತ್ತದೆ. ಹಿಂಗಾರು ಬೆಳೆಗೆ (ರಾಬಿ) ವಿಮಾ ಮೊತ್ತದ ಮೇಲೆ ಗರಿಷ್ಠ ಶೇ. 1.5ರವರೆಗೆ; ಮುಂಗಾರು ಬೆಳೆ (ಖಾರಿಫ್), ಆಹಾರ ಬೆಳೆಗಳು, ದ್ವಿದಳ ಧಾನ್ಯ ಮತ್ತು ಬೇಳೆಕಾಳುಗಳಿಗೆ ವಿಮಾ ಮೊತ್ತದ ಶೇ. 2ರವರೆಗೆ; ವಾರ್ಷಿಕ ತೋಟಗಾರಿಕೆ/ವಾಣಿಜ್ಯ ಬೆಳೆಗಳಿಗೆ ವಿಮಾ ಮೊತ್ತದ ಶೇ. 5ರವರೆಗೆ. ಈ ಯೋಜನೆಯಲ್ಲಿ ಕೊಯ್ಲಿನ ನಂತರದ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿನ ನಷ್ಟ ಸಂಭಾವ್ಯತೆಯೂ ಸೇರಿದಂತೆ ಬೆಳೆಚಕ್ರದ ಎಲ್ಲಾ ಹಂತಗಳಿಗೂ ವಿಮಾ ರಕ್ಷೆ ದೊರೆಯುತ್ತದೆ.

## ಪ್ರೀಮಿಯಂ ವ್ಯತ್ಯಾಸ

ಪ್ರೀಮಿಯಂ ಮತ್ತು ರೈತರು ಪಾವತಿಸುವ ವಿಮಾ ದರದ ನಡುವಿನ ವ್ಯತ್ಯಾಸದ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುತ್ತವೆ.



## ವಿವಿಧ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಇಳುವರಿ ನಷ್ಟಕ್ಕೆ ವಿಮಾ ರಕ್ಷೆ

1. ನೈಸರ್ಗಿಕವಾದ ಅಗ್ನಿ, ಆಕಸ್ಮಿಕ ಮತ್ತು ಸಿಡಿಲು ಬಡಿಯುವಿಕೆ 2. ಬಿರುಗಾಳಿ, ಆಲಿಕಲ್ಲು, ಚಂಡಮಾರುತ, ತೂಫಾನು, ಸುಂಟರಗಾಳಿ, ಭಾರೀ ಬಿರುಗಾಳಿ, ಮುಂತಾದುವು 3, ಪ್ರವಾಹ, ಜಲಪ್ರಳಯ ಮತ್ತು ಭೂಕುಸಿತ 4. ಕ್ಷಾಮ, ಒಣಹವೆಯಿಂದ ನಾಶ (ಡ್ರೈಸ್ಪೆಲ್ಸ್) 5. ಕೀಟಗಳು, ರೋಗಗಳು ಮುಂತಾದ ಕೊಯ್ಲಿನ ನಂತರದ ನಷ್ಟಗಳು ಹಾಗೂ ಸೂಚಿತ ಪ್ರದೇಶದಲ್ಲಿ ಏಕಾಕಿಯಾಗಿರುವ (ಐಸೋಲೋಟೆಡ್) ಕೃಷಿ ಭೂಮಿಯಲ್ಲಿ ಗುರುತಿಸಲಾದ ಸ್ಥಳೀಯ ಗಂಡಾಂತರ (ರಿಸ್ಕ್)ಗಳಿಂದ (ಉದಾ: ಆಲಿಕಲ್ಲು, ಭೂಕುಸಿತ, ಜಲಪ್ರಳಯ) ಉಂಟಾಗಬಹುದಾದ ನಷ್ಟ/ಹಾನಿಗಳು ಈ ಯೋಜನೆಯಲ್ಲಿ ವಿಮಾ ರಕ್ಷೆಗೆ ಒಳಪಡುತ್ತವೆ.

## 3 ಹಂತಗಳ ನಷ್ಟ ಪರಿಹಾರ

ಆಯಾ ಪ್ರದೇಶದ ಬೆಳೆ ನಷ್ಟ ಸಂಭಾವ್ಯತೆಗನುಗುಣವಾಗಿ ಮೂರು ಹಂತಗಳಲ್ಲಿ ಅಂದರೆ – ಶೇ. 70, ಶೇ.80 ಮತ್ತು ಶೇ.90ರಷ್ಟು ನಷ್ಟ ಪರಿಹಾರವು ಎಲ್ಲಾ ಬೆಳೆಗಳಿಗೂ ಲಭ್ಯವಿರುತ್ತದೆ.

## ಸಾಲ ಪಡೆದ ರೈತರಿಗೆ ಕಡ್ಡಾಯ ಯೋಜನೆ

ಅನುಸೂಚಿತ ಬೆಳೆಗಳಿಗೆ ಸಂಬಂಧಿಸಿದ ಬೆಳೆ ಸಾಲ/ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲವನ್ನು ಪಡೆಯುವ ರೈತರಿಗೆ ಈ ಯೋಜನೆಯು ಕಡ್ಡಾಯವಾಗಿದೆ. ಆದರೆ ವಿಮೆ ಮಾಡದ ಬೆಳೆಗಳ ಮೇಲೆ ವಿಮಾ ಆಸಕ್ತಿ ಹೊಂದಿರುವ ಇತರರು/ಸಾಲ ಪಡೆಯದ ರೈತರು ಸ್ವ ಇಚ್ಛೆಯಿಂದ ಈ ಯೋಜನೆಯಲ್ಲಿ ಪಾಲ್ಗೊಳ್ಳಬಹುದು.




**ನಷ್ಟ ಪರಿಹಾರ = ಕಾನೂನಾತ್ಮಕ ಜವಾಬ್ದಾರಿ, ನಷ್ಟ ಅಥವಾ ಹಣಕಾಸು ಸಂಕಷ್ಟಕ್ಕೆ ಪ್ರತಿಯಾಗಿ ನೀಡುವ ರಕ್ಷಣೆ**

## ಸಂದೇಶ 5 : ನೈಸರ್ಗಿಕ ವಿಕೋಪದಿಂದ ತಮ್ಮ ಬೆಳೆ ನಾಶವಾದರೆ ಹತಾಶರಾಗದಿರಿ – ಬೆಳೆ ನಷ್ಟ ಪ್ರಮಾಣದ ಬಗ್ಗೆ ನಿಮ್ಮ ಬ್ಯಾಂಕಿಗೆ ತಿಳಿಸಿ ಅವರಿಂದ ನೆರವು ಕೇಳಿರಿ



ಒಮ್ಮೆ ಕೇಂದ್ರ/ರಾಜ್ಯ ಸರ್ಕಾರವು ನಿಮ್ಮ ಪ್ರದೇಶವು ನೈಸರ್ಗಿಕ ವಿಕೋಪಕ್ಕೆ (ಉದಾ: ಚಂಡಮಾರುತ, ಕ್ಷಾಮ, ಭೂಕಂಪ, ಅಗ್ನಿ ಆಕಸ್ಮಿಕ, ನೆರೆ, ಸುನಾಮಿ, ಆಲಿಕಲ್ಲು ಮಳೆ, ಭೂಕುಸಿತ, ಹಿಮಪಾತ, ಮೇಘಸ್ಫೋಟ, ಕೀಟ ಹಾವಳಿ ಮತ್ತು ಶೀತಗಾಳಿ/ಹಿಮಗಡ್ಡೆ) ತುತ್ತಾಗಿದೆಯೆಂದು ಘೋಷಿಸಿದ ಮೇಲೆ ಮತ್ತು ನಿಮ್ಮ ಬೆಳೆ ನಷ್ಟವು ಶೇ. 33ಕ್ಕಿಂತಲೂ ಹೆಚ್ಚಿದೆಯೆಂದು ನಿರ್ಣಯಿಸಿದ ಮೇಲೆ ನಿಮಗೆ ಸಾಲ ನೀಡಿದ ಬ್ಯಾಂಕಿನ ಶಾಖೆಯನ್ನು ನೀವು ಕಡ್ಡಾಯವಾಗಿ ಸಂಪರ್ಕಿಸಬೇಕಾಗುತ್ತದೆ. ಏಕೆಂದರೆ ನೈಸರ್ಗಿಕ ವಿಕೋಪದಿಂದಾದ ನಷ್ಟವು ನಿಮ್ಮ ಮರುಪಾವತಿ ಸಾಮರ್ಥ್ಯವನ್ನು ಘಾಸಿಗೊಳಿಸಿರುತ್ತದೆ.

## ನಿಮಗೆ ಬ್ಯಾಂಕು ಯಾವ ರೀತಿ ಸಹಾಯ ಮಾಡಬಹುದು?




**ಅಲ್ಪಾವಧಿ ಸಾಲಗಳು (ಬೆಳೆ ಸಾಲಗಳು)**

ನಷ್ಟವು ಶೇ.33ರಿಂದ ಶೇ.50ರ ನಡುವೆ ಇದ್ದರೆ ಮರುಪಾವತಿ ಅವಧಿಯನ್ನು ಗರಿಷ್ಠ ಎರಡು ವರ್ಷಗಳ ವರೆಗೆ (ಒಂದು ವರ್ಷದ ಮರುಪಾವತಿ ನಿಷೇಧ ಅವಧಿಯೂ –ಮೊರೊಟೋರಿಯಂ– ಸೇರಿದಂತೆ) ನೀಡಲಾಗುತ್ತದೆ. ಬೆಳೆ ನಷ್ಟವು ಶೇ.50ಕ್ಕಿಂತ ಹೆಚ್ಚಿದ್ದಲ್ಲಿ ಪುನರ್ರಚಿತ ಮರುಪಾವತಿ ಅವಧಿಯನ್ನು ಗರಿಷ್ಠ 5 ವರ್ಷಗಳವರೆಗೆ (ಒಂದು ವರ್ಷದ ಮರುಪಾವತಿ ನಿಷೇಧ ಅವಧಿಯೂ –ಮೊರೊಟೋರಿಯಂ– ಸೇರಿದಂತೆ) ವಿಸ್ತರಿಸಬಹುದು.

ನಿಮ್ಮ ಅಲ್ಪಾವಧಿ ಸಾಲದ ಮೇಲಿನ ಅಸಲು ಮತ್ತು ಬಡ್ಡಿಯನ್ನು ಅವಧಿ ಸಾಲವನ್ನಾಗಿ ಪರಿವರ್ತಿಸಿ.

**ಕೃಷಿ ಸಾಲಗಳು:** ದೀರ್ಘಾವಧಿ (ಹೂಡಿಕೆ) ಸಾಲ: ನಿಮ್ಮ ಮರುಪಾವತಿ ಸಾಮರ್ಥ್ಯ ಮತ್ತು ನೈಸರ್ಗಿಕ ವಿಕೋಪದ ಸ್ವಭಾವ ಹಾಗೂ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಹಾಲಿ ಇರುವ ನಿಮ್ಮ ಅವಧಿ ಸಾಲದ ಕಂತುಗಳನ್ನು ಮರು ಹೊಂದಾಣಿಕೆ ಮಾಡಲಾಗುವುದು.

ಸಾಲದ ಅವಧಿಯನ್ನು ಪುನರ್ರಚಿಸುವ ಎಲ್ಲಾ ಪ್ರಕರಣಗಳಲ್ಲಿಯೂ ಕನಿಷ್ಠ ಒಂದು ವರ್ಷದ ಮರುಪಾವತಿ ನಿಷೇಧ ಅವಧಿಯನ್ನು ಪರಿಗಣಿಸಲಾಗುವುದು. ಅಲ್ಲದೆ ಹಾಗೆ ಪುನರ್ರಚಿಸಿದ ಸಾಲಗಳಿಗೆ ಬ್ಯಾಂಕುಗಳು ಇನ್ನಷ್ಟು ಜೊತೆಯಾಧಾರಗಳನ್ನು ಕೇಳುವುದಿಲ್ಲ.

**ನೈಸರ್ಗಿಕ ವಿಕೋಪಗಳಿಂದ ನೀವು ಬೆಳೆ ನಷ್ಟ ಅನುಭವಿಸಿದಾಗ, ಆ ಬಗ್ಗೆ ಬ್ಯಾಂಕ್ ಶಾಖೆಗೆ ತಿಳಿಸಿ ಬ್ಯಾಂಕಿನಿಂದ ಸೂಕ್ತ ನೆರವು ಕೋರುವುದು ನಿಮ್ಮ ಕರ್ತವ್ಯ**

## ಗುರಿ ಪ್ರಧಾನ ಹಣಕಾಸು ಸಾಕ್ಷರತಾ ಪುಸ್ತಿಕೆ

ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಡಿ.ಕೆ. ಮೊಹಂತಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ 'ಹಣಕಾಸು ಸೇರ್ಪಡೆಗಾಗಿ ಮಧ್ಯಮಾವಧಿ ಮಾರ್ಗ ಸಮಿತಿ'ಯ ಶಿಫಾರಸುಗಳ ಪೈಕಿ – "ವಿವಿಧ ಉದ್ದೇಶಿತ ಗುಂಪುಗಳು ವಿಭಿನ್ನ ರೀತಿಯ ಹಣಕಾಸು ಶಿಕ್ಷಣವನ್ನು ಅಪೇಕ್ಷಿಸುವುದರಿಂದ ಹಣಕಾಸು ಶಿಕ್ಷಣದಲ್ಲಿ 'ಎಲ್ಲವನ್ನೂ ಒಳಗೊಂಡ ಒಂದೇ ಬುಟ್ಟಿ' (A one size fits all) ಎನ್ನುವ ವಿಧಾನವು ಅಷ್ಟೇನೂ ಸಮರ್ಪಕವೆನಿಸಲಾರದು, ಆದುದರಿಂದ ವಿವಿಧ ಉದ್ದೇಶಿತ ಗುಂಪುಗಳಿಗೆ ತಕ್ಕಂತೆ ಶಿಕ್ಷಣ ಸಾಮಗ್ರಿಯನ್ನು ರೂಪಿಸುವುದು ಅಗತ್ಯ" ಎಂಬುದೂ ಒಂದು.

ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗವು ರೈತರು, ಸಣ್ಣ ಉದ್ದಿಮೆದಾರರು, ಶಾಲಾ ಮಕ್ಕಳು, ಸ್ವಸಹಾಯ ಗುಂಪುಗಳು ಮತ್ತು ಹಿರಿಯ ನಾಗರಿಕರು – ಹೀಗೆ ಐದು ವಿವಿಧ ಉದ್ದೇಶಿತ ಗುಂಪುಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಕ್ಕೆ ತಕ್ಕಂತಹ ಹಣಕಾಸು ಸಾಕ್ಷರತಾ ಪುಸ್ತಿಕೆಗಳನ್ನು ಹೊರತಂದಿದೆ. ಐದು ಪುಸ್ತಕಗಳ ಈ ಶ್ರೇಣಿಯಲ್ಲಿ ಈ ಪುಸ್ತಕವೂ ಒಂದು.

**ಹಕ್ಕು ನಿರಾಕರಣೆ (ಡಿಸ್‌ಕ್ಲೇಮರ್)**

ಓದುಗರನ್ನು ಹಣಕಾಸು ಸಾಕ್ಷರರನ್ನಾಗಿ ಮಾಡಬೇಕೆಂಬ ಪ್ರಾಮಾಣಿಕ ಉದ್ದೇಶದಿಂದ ಈ ಪುಸ್ತಕವನ್ನು ಓದಲು ಮತ್ತು ಬೋಧಿಸಲು ಅನುಕೂಲಕರವಾದ ವಸ್ತುವನ್ನಾಗಿ ರೂಪಿಸಲಾಗಿದೆಯೇ ಹೊರತು ಇದರಲ್ಲಿ ಯಾವುದೇ ನಿರ್ದಿಷ್ಟ ಹಣಕಾಸು ಉತ್ಪನ್ನಗಳು ಅಥವಾ ಸೇವೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವಂತೆ ಓದುಗರ ಮೇಲೆ ಪ್ರಭಾವ ಬೀರುವ ಯಾವುದೇ ಉದ್ದೇಶವಿರುವುದಿಲ್ಲ.

**ಹಕ್ಕುಗಳು:**
ಮೊದಲ ಮುದ್ರಣ = ಏಪ್ರಿಲ್ 2018
ವಿಷಯಗಳ ಮೂಲವನ್ನು ಸ್ಮರಿಸಿದ ಸಂದರ್ಭದಲ್ಲಿ ಮಾತ್ರ ಇದರಲ್ಲಿ ಅಡಕವಾಗಿರುವ ಅಂಶಗಳ ಮರುಬಳಕೆಗೆ ಅನುಮತಿ ಇದೆ.

**ಲೇಖಕರು ಮತ್ತು ಪ್ರಕಾಶಕರು:**
ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ
ಭಾರತೀಯ ರಿಸರ್ವ್ ಬ್ಯಾಂಕ್
10ನೇ ಮಹಡಿ, ಕೇಂದ್ರೀಯ ಕಛೇರಿ ಕಟ್ಟಡ
ಷಾಹೀದ್ ಭಗತ್ ಸಿಂಗ್ ಮಾರ್ಗ, ಕೋಟೆ, ಮುಂಬಯಿ

**ಆಭಾರ ಮನ್ನಣೆ**
ವಿನ್ಯಾಸ: ಕೌಶಿಕ್ ರಾಮಚಂದ್ರನ್

**ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ**
ಭಾರತೀಯ ರಿಸರ್ವ್ ಬ್ಯಾಂಕು
10ನೇ ಮಹಡಿ, ಕೇಂದ್ರ ಕಛೇರಿ, ಮುಂಬಯಿ 400 001, ಭಾರತ